(ಇಂದು ದಿನಾಂಕಃ 30–10–2025 ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

ಮುಂದುವರೆದ ಪಾಟೀಸವಾಲು ಃ ಶ್ರೀ ವಿ ಟಿ ಕೆ ವಕೀಲರಿಂದ ಃ -

4) ನಾನು ಮತ್ತು 1 ನೇ ಪ್ರತಿವಾದಿಯು, 1 ನೇ ವಾದಿಯ ವಿರುದ್ಧ ಮಾನ್ಯ ಇದೇ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ 425/2015 ವಾಟನಿ ಮಾಡಲು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಅದು ನಮ್ಮ ಸಹೋದರಿ ನಮ್ಮ ವಿರುದ್ಧ ಹೂಡಿದ್ದು ಇರುತ್ತದೆ. ಸದರಿ ದಾವೆಯಲ್ಲಿ ನಾನು ನನ್ನ ಸಹೋದರಿ ಪರವಾಗಿ ನನ್ನ ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತೇನೆ ಅಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ನನ್ನ ತಾಯಿ ನಮ್ಮ ಪಾಲು ನಮಗೆ ನೀಡಲು ಕೋರಿರುತ್ತೇನೆ ಎಂದು ನುಡಿಯುತ್ತಾರೆ.

5) ಸದರಿ ದಾವೆಯಲ್ಲಿ 101/1+2+3/ಅ, 104/1, 107/1, 108/1 ಆಸ್ತಿಗಳು ದಾವಾ ಆಸ್ತಿಗಳು ಆಗಿದ್ದವು ಎಂದರೆ ಸರಿ. ಸದರಿ ಆಸ್ತಿಗಳನ್ನು ಹೊರತು ಪಡಿಸಿ ಬೇರೆ ಆಸ್ತಿಗಳು ಸಹ ಇದ್ದವು ಎಂದರೆ ಸರಿ. ಸದರಿ ದಾವೆಯಲ್ಲಿ ನಾಗರಾಜನು 101/1+2+3/ಅ ಹಾಗೂ 108/1 ಆಸ್ತಿಗಳು ಆತನ ಸ್ವಯಾರ್ಜಿತ ಆಸ್ತಿ ಎಂದು ಪ್ರತಿವಾದ ಪತ್ರ ಸಲ್ಲಿಸಿರುತ್ತಾನೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ. ಅಸಲು ದಾವಾ ಸಂಖ್ಯೆ 425/2015 ಭಾಗಶಃ ಆದೇಶವಾಗಿರುತ್ತದೆ ಎಂದರೆ ಸಾಕ್ಷಿಯು ಈಗ ಅದು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿರುತ್ತದೆ ಎಂದು ನುಡಿಯುತ್ತಾರೆ. ಅಸಲು ದಾವಾ ಸಂಖ್ಯೆ 425/2015 ರಲ್ಲಿ ಆಸ್ತಿ ಸಂಖ್ಯೆ 101/1+2+3/ಅ ಹಾಗೂ 108/1 ರಲ್ಲಿ ನನಗೆ ಯಾವುದೇ ಪಾಲು ಘೋಷಣೆಯಾಗಿರುವುದಿಲ್ಲ ಎಂದರೆ ಸರಿ. ಸದರಿ ದಾವೆಯಲ್ಲಿ 104/1 ಹಾಗೂ 107/1 ಆಸ್ತಿಗಳಲ್ಲಿ ನಾಗರಾಜನಿಗೆ ಪಾಲು ಘೋಷಣೆಯಾಗಿರುತ್ತದೆ ಎಂದರೆ ಸರಿ.

6) 108/1 ರ ನಡುವಿನಲ್ಲಿ ಗದ್ದನಿ ಹಳ್ಳ ಹರಿದಿರುತ್ತದೆ ಎಂದರೆ ಸರಿ. ಆದಕಾರಣ ಅದು ವಿಭಾಗವಾಗಿರುತ್ತದೆ ಎಂದರೆ ಸರಿ. ಸದರಿ ಆಸ್ತಿಯಲ್ಲಿ 1 ನೇ ವಾದಿಯು

ದಕ್ಷಿಣ ಭಾಗದಲ್ಲಿ ಪಂಪಸೆಟ್‌ಗೆ ಶೆಡ್ ನಿರ್ಮಾಣ ಮಾಡಿರುತ್ತಾನೆ ಅಂದರೆ ಸರಿಯಲ್ಲ. 1 ನೇ ವಾದಿಯು ದಾವೆಯಲ್ಲಿ ಹಾಜರು ಪಡಿಸಿದ ಸ್ವಲ್ಪ ದಾಖಲೆಗಳನ್ನು ಮಾತ್ರ ನೋಡಿರುತ್ತೇನೆ. ಸಾಕ್ಷಿಗೆ ಈಗ ನಿಪಿ-1 ನ್ನು ತೋರಿಸಿ ಅದರಲ್ಲಿ ಆಸ್ತಿಯು 2 ನೇ ವಾದಿಯ ಹೆಸರಿನಲ್ಲಿರುತ್ತದೆ ಎಂದರೆ ಸಾಕ್ಷಿಯು ಈ ಮೊದಲು 1 ನೇ ವಾದಿಯ ಹೆಸರಿನಲ್ಲಿದ್ದು ಅಸಲು ದಾವಾ ಸಂಖ್ಯೆ 425/2015 ರ ಮೇಲ್ಮನವಿಯನ್ನು ಉಚ್ಚ ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿರುವ ಸಮಯದಲ್ಲಿ ಅದನ್ನು ಬದಲಾವಣೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಆಸ್ತಿಯನ್ನು 1 ನೇ ವಾದಿಯು 2 ನೇ ವಾದಿಗೆ ಗಿಫ್ಟ್ (ನೋಂದಾಯಿತ ದಾನ ಪತ್ರದ ಮೂಲಕ) ವರ್ಗಾವಣೆ ಮಾಡಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ಈಗ ನಿಪಿ-2 ನ್ನು ತೋರಿಸಿ ಆಸ್ತಿ ಸಂಖ್ಯೆ 108/1, 2 ನೇ ವಾದಿಯ ಹೆಸರಿನಲ್ಲಿರುತ್ತದೆ ಎಂದರ ಸರಿ.

7) ಸಾಕ್ಷಿಗೆ ಈಗ ನಿಪಿ-16 ನ್ನು ತೋರಿಸಿ ಅದರಲ್ಲಿ 1 ನೇ ವಾದಿಯು ಆಸ್ತಿ ಸಂಖ್ಯೆ 101/1+2+3/ಅ ಹಾಗೂ 108/1 ರಲ್ಲಿ ಪಂಪಸೆಟ್ ಅಳವಡಿಸಿ ನೀರು ಎಳೆಯಲು ಅನುಮತಿ ಪಡೆದಿದ್ದು ಇರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅದರಲ್ಲಿ ನಮ್ಮ ಸುಳ್ಳು ಸಹಿಗಳನ್ನು ಅವರೇ ಮಾಡಿ ನಂತರದಲ್ಲಿ ಅದು ರದ್ದಾಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ವಿಷಯವನ್ನು ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ರದ್ದಾದ ಬಗ್ಗೆ ದಾಖಲೆ ಹಾಜರು ಪಡಿಸಿರುತ್ತೇನೆ. ಸಾಕ್ಷಿಗೆ ತಾವು ಸಲ್ಲಿಸಿದ ದಾಖಲೆಗಳನ್ನು ಪರಿಶೀಲಿಸಲು ನೀಡಿ, ಸಾಕ್ಷಿಯು ಪರಿಶೀಲಿಸಿ ನಿಡಿ-16 ನ್ನು ತೋರಿಸುತ್ತಾರೆ.

8) 1 ನೇ ವಾದಿಯು ಆಸ್ತಿ ಸಂಖ್ಯೆ 101/1+2+3/ಅ, 108/1, 107/1, 104/1 ರಲ್ಲಿ ದಕ್ಷಿಣ ಬದುವಿನ ಗುಂಟ ನೆಲದ 5 ಅಡಿ ಕೆಳಗೆ ಅಗೆದು ನೀರಿನ ಪೈಪಲೈನನ್ನು ಅಳವಡಿಸಿ ಪಂಪಸೆಟ್ ಮೂಲಕ ನೀರು ಎಳೆಯಲು ತಹಶೀಲ್ದಾರ ನವಲಗುಂದ ರವರಲ್ಲಿ ಪರವಾನಿಗೆ ಕೇಳಿ ಅನುಮತಿ ಕೋರಿ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ತಹಶೀಲ್ದಾರ ರವರು ಆಸ್ತಿ ಸಂಖ್ಯೆ 104/1 ಹಾಗೂ 107/1 ಆಸ್ತಿಗಳು ಅರ್ಜಿದಾರನಿಗೆ ಆತನದೆ ಜಮೀನು ಇದ್ದ ಕಾರಣ ಅನುಮತಿ ಅವಶ್ಯಕತೆ ಇರುವುದಿಲ್ಲ ಎಂದು ಹಿಂಬರಹ

ನೀಡಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ. ಸದರಿ ಕೆಲಸಕ್ಕೆ ಹೆಸ್ಕಾಂ ರವರು ಸಹ ಪರವಾನಿಗೆ ಪತ್ರ ನೀಡುತ್ತೇವೆ ಎಂದು ತಿಳಿಸಿರುತ್ತಾರೆ ಎಂದರೆ ಸಾಕ್ಷಿಯು ನಮಗೆ ಮಾಹಿತಿ ಬಂದು ನಮ್ಮ ಸುಳ್ಳು ಸಹಿ ಇರುತ್ತದೆ ನೀಡಬಾರದು ಎಂದು ತಕರಾರು ಸಲ್ಲಿಸಿರುತ್ತೇವೆ.

9) ನಾನು 1 ನೇ ವಾದಿಯ ವಿರುದ್ಧ ಸಲ್ಲಿಸಿದ ಅಪರಾಧಿಕ ಪ್ರಕರಣಗಳಲ್ಲಿ ಆತನಿಗೆ ಬಿಡುಗಡೆಯಾಗಿರುತ್ತದೆ ಅಂದರೆ ಸರಿಯಲ್ಲ. ಆಸ್ತಿ ಸಂಖ್ಯೆ 104/1 ಹಾಗೂ 107/1 ರಲ್ಲಿ 1 ನೇ ವಾದಿಗೆ ಹಕ್ಕು ಇರುತ್ತದೆ ಎಂದರೆ ಸಾಕ್ಷಿಯು ಅದು ಏಕತ್ರ ಮನೆತನದ ಆಸ್ತಿ ಇರುತ್ತದೆ ಎಲ್ಲರಿಗೂ ಸಮಾನ ಹಕ್ಕು ಇರುತ್ತದೆ ಎಂದು ನುಡಿಯುತ್ತಾರೆ. ಆಸ್ತಿ ಸಂಖ್ಯೆ 104/1 ಹಾಗೂ 107/1 ರ ದಕ್ಷಿಣ ಕೋಣೆಯಿಂದ ನೆಲದ 5 ಅಡಿ ಕೆಳಗೆ ಪೈಪಲೈನ ಅಳವಡಿಸಿದರೆ ನಮಗೆ ಹಾನಿಯಾಗುವುದಿಲ್ಲ ಅಂದರೆ ಸರಿಯಲ್ಲ. ಸದರಿ ಆಸ್ತಿ ಸಂಖ್ಯೆ 104/1 ಹಾಗೂ 107/1 ರ ದಕ್ಷಿಣ ಭಾಗವನ್ನು 1 ನೇ ವಾದಿಗೆ ನೀಡಿ ಅದರಲ್ಲಿ ಪೈಪಲೈನ ಅಳವಡಿಸಿದರೆ ನಮಗೆ ಯಾವುದೇ ಹಾನಿಯಾಗುವುದಿಲ್ಲ ಅಂದರೆ ಸರಿಯಲ್ಲ. ಆಸ್ತಿ ಸಂಖ್ಯೆ 104/1 ಹಾಗೂ 107/1 ರಲ್ಲಿ ಪೈಪಲೈನ ಅಳವಡಿಸಲು ಪ್ರಸ್ತಾಪಿಸಿದ ಭಾಗವನ್ನು 1 ನೇ ವಾದಿಗೆ ಪಾಲುವಿಭಾಗದಲ್ಲಿ ನೀಡಿದರೆ ಹಾನಿ ಉಂಟಾಗುವ ಸಂದರ್ಭ ಬರುವುದಿಲ್ಲ ಅಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಎಲ್ಲಾ ಆಸ್ತಿಗಳಲ್ಲಿಯು ಪಾಲುವಿಭಾಗವಾಗಬೇಕು ಎಂದು ನುಡಿಯುತ್ತಾರೆ. ಸದರಿ ವಿಷಯವನ್ನು ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

10) ಆಸ್ತಿ ಸಂಖ್ಯೆ 101/1+2+3/ಅ ಹಾಗೂ 108/1 ಮಳೆ ಆಸ್ರಿತ ಜಮೀನುಗಳು ಅಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅದು ನೀರಾವರಿ ಜಮೀನು ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ವಿಷಯವನ್ನು ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಸದರಿ ಆಸ್ತಿಗಳು ಊರಿನ ಕೊನೆಯಲ್ಲಿ ಇರುವ ಆಸ್ತಿಗಳಾದ ಕಾರಣ ಅವು ನೀರಾವರಿ ಜಮೀನು ಆಗಲು ಬರುವುದಿಲ್ಲ ಅಂದರೆ ಸರಿಯಲ್ಲ.

11) 1 ನೇ ವಾದಿಗೆ ತೊಂದರೆ ಉಂಟಾಗಲೆಂದು ನಾನು ಸುಳ್ಳು ತಕರಾರುಗಳನ್ನು ಸಲ್ಲಿಸಿರುತ್ತೇವೆ ಅಂದರೆ ಸರಿಯಲ್ಲ. 1 ನೇ ವಾದಿಯು ಒಂದು ವೇಳೆ ಪೈಪಲೈನ ಅಳವಡಿಸಿ ನೀರು ಎಳೆದುಕೊಂಡರೆ ಆತನ ಹೊಲದ ಫಲವತ್ತತೆಯು ಬೆಳೆಯುತ್ತದೆ ಆತನು ಆರ್ಥಿಕವಾಗಿ ಬಲ ಪಡೆಯುತ್ತಾನೆ ಅದನ್ನು ತಡೆಯಲು ಸುಳ್ಳು ಸಂಗತಿಗಳನ್ನು ಮುಂದೆ ಮಾಡಿ, ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

<u>ಮರು ವಿಚಾರಣೆ ಃ ಇಲ್ಲಾ.</u>

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)*

**ಓ. ಹೇ. ಕೇ. ಸರಿ. ಇದೆ.**

(ನವೀನ ಎಫ್. ಡಿಸೋಜಾ)
**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**
**ನವಲಗುಂದ.**